**ದಿನಾಂಕಃ 15/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ ಎನ್ ಬಿ ವಕೀಲರಿಂದಃ**

1. ನಾನು New India insurance ಕಛೇರಿಯಲ್ಲಿ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೆನೆ. ಆರೋಪಿಯನ್ನು 10 ವರ್ಷದಿಂದ ಪರಿಚಯ ಇದೆ.

2. ದಿಃ 20.07.2023 ರಂದು ಆರೋಪಿ ಹಣವನ್ನು ಕೇಳಿರುತ್ತಾರೆ. ಆರೋಪಿ ಕುವೆಂಪುನಗರ ಶಾಖೆಯ ಐ ಡಿ ಬಿ ಐ ಬ್ಯಾಂಕಿನ ಚೆಕ್ ನ್ನು ನೀಡಿರುತ್ತಾರೆ. ಆರೋಪಿ ದಿಃ 14.07.2023 ರಂದು ಹಣವನ್ನು ಕೇಳಿರುತ್ತಾರೆ. ಅವರಿಗೆ ಹಣವನ್ನು ದಿಃ 20.07.2023 ರಂದು ನೀಡಿರುತ್ತೇನೆ. ಹೂವಿನ ವ್ಯಾಪಾರಕ್ಕಾಗಿ ಹಣವನ್ನು ಕೇಳಿರುತ್ತಾರೆ. ಆರೋಪಿ ನೀಡಿದ್ದಾನೆ ಎನ್ನಲಾದ ಚೆಕ್ ನ್ನು ದಿಃ 22.08.2023 ರಂದು ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿರುತ್ತೇನೆ. ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇರುವುದಿಲ್ಲ ಎಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ಆರೋಪಿಗೆ ಹಣ ನೀಡಿರುವುದಿಲ್ಲ ಹಾಗೂ ಆರೋಪಿ ನನಗೆ ಚೆಕ್ ನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲಿನ ವ್ಯಯಕ್ತಿಕ ದ್ವೇಷದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

3. 4 ಚಕ್ರದ ವಾಹನಗಳನ್ನು ಖರೀದಿಸಿ ಮಾರಾಟ ಮಾಡುವ ಕೆಲಸ ಮಾಡುತ್ತಿದ್ದೆನೆಂದರೆ ಸರಿಯಲ್ಲ. ಆರೋಪಿಗೆ 2012 ರಲ್ಲಿ ಕೆ ಎ 45 6505 ನೊಂದಣಿ ಸಂಖ್ಯೆಯ ಟಾ ಟಾ ಎ ಸಿ ವಾಹನವನ್ನು ಕೊಡಿಸಿ, ಕುವೆಂಪುನಗರದಲ್ಲಿರುವ ಐಡಿಬಿಐ ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ಚೆಕ್ ನ್ನು ಬ್ಯಾಂಕಿನಿಂದ ಕೊಡಿಸಿರುತ್ತೇನೆಂದರೆ ಸರಿಯಲ್ಲ. ನಾನು ವಾಹನವನ್ನು ಮಾರಾಟ ಮಾಡುವ ಬಗ್ಗೆ ದಲ್ಲಾಳಿ ಕೆಲಸ ಮಾಡುವ ಕಾರಣ ಆರೋಪಿಯ ಬ್ಯಾಂಕ್ ಪುಸ್ತಕ ಹಾಗೂ ಚೆಕ್ ಪುಸ್ತಕವನ್ನು ನಾನೇ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಕೇಳಿದಷ್ಟು ಹಣವನ್ನು ಆರೋಪಿ ನನಗೆ ನೀಡಿದೆ ಇರುವ

ಕಾರಣ ಆರೋಪಿಯ ಚೆಕ್ ಪುಸ್ತಕದ ಹಾಳೆಯನ್ನು ದುರುಪಯೋಗಪಡಿಸಿಕೊಂಡು ಅದರಲ್ಲಿ ಆರೋಪಿಯ ಸಹಿಯನ್ನು ನಾನೇ ಹಾಕಿರುತ್ತೇನೆಂದರೆ ಸರಿಯಲ್ಲ.

4. ಆರೋಪಿಗೆ 2019 ರಲ್ಲಿ ಕೆ ಎ 46-4194 ನೊಂದಣಿ ಸಂಖ್ಯೆಯ ಗೂಡ್ಸ ವಾಹನವನ್ನು ಕೊಡಿಸಿರುತ್ತೆನೆಂದರೆ ಸರಿಯಲ್ಲ.

5. ದಿಃ 28.08.2023 ರಂದು ಆರೋಪಿಗೆ ನನ್ನ ವಕೀಲ ಮೂಲಕ ನೋಟೆಸ್ಸನ್ನು ನೀಡಿರುತ್ತೇನೆ. ದಿಃ 18.09.2023 ರಂದು ಆರೋಪಿ ನೋಟೆಸ್ಸನ್ನು ಸ್ವೀಕರಿಸಿರುತ್ತಾರೆ. ನಿಪಿ 1 ರಲ್ಲಿರುವ ಸಹಿ ಮತ್ತು ನಿಪಿ 5 ರಲ್ಲಿರುವ ಸಹಿಯಲ್ಲಿ ವ್ಯತಾಸ ಇದೆ ಎಂದರೆ ಸರಿಯಲ್ಲ.

6. ಆರೋಪಿ ನನ್ನೊಂದಿಗೆ ವ್ಯವಹಾರ ಮಾಡಿರುವುದಿಲ್ಲ ಹಾಗೂ ಆರೋಪಿಗೆ ನನ್ನ ಪರಿಚಯ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನಾನೇ ಅದರಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**